ದಿನಾಂಕ 03/01/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಯಿತು.**

**ಪಾಟೀ ಸವಾಲು :- ಶ್ರೀ ಪಿ.ಡಿ.ಟಿ. ವಾದಿ ಪರ ವಕೀಲರಿಂದ**

ಮೂಲ ಪುರುಷ ಕಾಮಣ್ಣ ಮತ್ತು ಅಕ್ಕಮ್ಮ ರವರ ವಿಚಾರ ಗೊತ್ತಿರುತ್ತದೆ. ಸದರಿಯವರು ಈಗ ಜೀವಂತ ಇರುವುದಿಲ್ಲ ಎಂದರೆ ಸರಿ. ಅವರಿಗೆ ಲಕ್ಕಪ್ಪ ಮತ್ತು ವೀರಲಕ್ಕಪ್ಪ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ. ಲಕ್ಕಪ್ಪನ ಹೆಂಡತಿ ಹೆಸರು ಸಣ್ಣರಂಗಮ್ಮ ಎಂದರೆ ಸರಿ. ಲಕ್ಕಪ್ಪ ಮತ್ತು ಸಣ್ಣರಂಗಮ್ಮ ರವರಿಗೆ ಚಿಕ್ಕರಂಗಮ್ಮ , ದೊಡ್ಡಕಾವಲಪ್ಪ , ರಂಗಪ್ಪ, ಕಾಮಣ್ಣ ಮತ್ತು ಸಣ್ಣಕಾಮಣ್ಣ , ರಂಗಪ್ಪ ಎಂಬ ಮಕ್ಕಳು ಇದ್ದರು ಎಂದರೆ ಸರಿ. ಸದರಿಯವರಲ್ಲಿ ಚಿಕ್ಕರಂಗಮ್ಮ ಮತ್ತು ರಂಗಪಪ್ಪ ವಾರಸುದಾರರು ಇಲ್ಲದೇ ತೀರಿಕೊಂಡಿರುತ್ತಾರೆ ಎಂದರೆ ಸರಿ. ಕಾಮಣ್ಣ ರವರಿಗೆ ಪುಟ್ಟಮ್ಮ ಎಂಬ ಹೆಂಡತಿ ಇದ್ದು ಅವರಿಗೆ ಅಕ್ಕಮ್ಮ, ನಾಗರಾಜು , ಸಿದ್ದಗಂಗಯ್ಯ ಮತ್ತು ಲತಾ ಎಂಬ ಮಕ್ಕಳು ಇದ್ದರು ಎಂದರೆ ಸರಿ. ಸಣ್ಣಕಾಮಣ್ಣನಿಗೆ ಪುಟ್ಟರಂಗಮ್ಮ ಹೆಂಡತಿ ಇದ್ದು ಅವರಿಗೆ ಉಮೇಶ್ ಎಂಬ ಒಬ್ಬ ಮಗ ಇದ್ದರು ಎಂದರೆ ಸರಿ. ವೀರಲಕ್ಕಪ್ಪನಿಗೆ ಈ ಕೇಸಿನ ವಾದಿ ಒಬ್ಬಳೇ ಮಗಳು ಇರುತ್ತಾರೆ ಎಂದರೆ ಸರಿಯಲ್ಲ. ವೀರಲಕ್ಕಪ್ಪನ ಹೆಂಡತಿ ಹೆಸರು ಸಾಕಮ್ಮ ಎಂದರೆ ಸರಿ. ಹೊಬಳಮ್ಮ ರವರು ಗಂಜಲಗುಂಟೆ ಗ್ರಾಮದಲ್ಲಿ ಹುಟ್ಟಿ ಬೆಳೆದು ಅಲ್ಲಿಯೇ ಮರಣಹೊಂದಿರುತ್ತಾರೆ ಎಂದರೆ ನನಗೆ ಗೂತ್ತಿರುವುದಿಲ್ಲ. ಹೊಬಳಮ್ಮ ರವರ ಮಗನೇ ವೀರಹನುಮಂತರಾಯಪ್ಪ ಎಂದರೆ ಸಾಕ್ಷಿ 2014 ರಿಂದ ಇಚೇಗೆ ನಾನು ಅವರನ್ನು ನೋಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ದಾವೆ ಹೂಡುವ ಕಾಲಕ್ಕೆ ಹೊಬಳಮ್ಮ ಇವರಿಗೆ 80 ವರ್ಷ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಹೊಬಳಮ್ಮ ಇವರ ಗಂಡನ ಹೆಸರು ಮಾರಣ್ಣ ಎಂದರೆ ನನಗೆ ಗೊತ್ತಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ